
# ಬೆಳಕಿನ ಸಂಚಲನ

ಸಂಪುಟ 10, ಸಂಚಿಕೆ 4 ದ್ವೈಮಾಸಿಕ ವಾರ್ತಾಪತ್ರ ಜುಲೈ-ಆಗಸ್ಟ್ 2022



**ಗುರೂಜಿ ಕೃಷ್ಣಾನಂದ** (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಠ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಭಾಷಣದ ಆಯ್ದ ಭಾಗಗಳು – ಫೆಬ್ರವರಿ 23, 1997)

**ಅನು: ಕಾಂಚನಲತಾ**

ನಮ್ಮ ಅಂತರಾಳದಲ್ಲಿ ಶಾಂತಿ ಮತ್ತು ಪ್ರೀತಿಯ ಒಂದು ಓಯಸಿಸ್ (oasis ಮರುಭೂಮಿಯಲ್ಲಿರುವ ನೀರಿನ ಬುಗ್ಗೆ) ಇದೆ. ಇದು ವಾಸ್ತವತೆ. ಈ ಓಯಸಿಸ್‌ನೊಂದಿಗೆ ಸಂಬಂಧವನ್ನು ಸ್ಥಾಪಿಸುವುದು ಸಾಧನೆಯ ಮೊದಲ ಹೆಜ್ಜೆ. ಅದನ್ನು ಮಾಡಿದರೆ, ನಮ್ಮ ಎಲ್ಲ ಸಮಸ್ಯೆಗಳೂ ಮಾಯವಾಗುತ್ತವೆ. ಇದು ಅತಿಶಯೋಕ್ತಿಯಲ್ಲ. ಆದರೆ ನಾವು ಅದನ್ನು ಮಾಡುವುದಿಲ್ಲ. ಆದುದರಿಂದಲೇ, ಈ ಜಗತ್ತಿನಲ್ಲಿ ಸಂಘರ್ಷಣೆಗಳು ಇರುವುದು. ನಾವು ನಮ್ಮ ಮೂಲದೊಂದಿಗೆ ಸಂಪರ್ಕ ಏರ್ಪಡಿಸಿಕೊಂಡರೆ, ನಾವು ಶಾಂತಿಯಿಂದಿರುತ್ತೇವೆ. ಆಗ ನಮ್ಮನ್ನು ಯಾರೂ ಅಸ್ಥಿರಗೊಳಿಸಲು ಸಾಧ್ಯವಿಲ್ಲ, ಇತರರು ನಮ್ಮಿಂದ ಪ್ರಭಾವಗೊಳ್ಳುತ್ತಾರೆ. ಶಾಂತಿ ಇದ್ದಾಗ, ಪ್ರೀತಿ ಹೊರಬರುತ್ತದೆ. ಇದು ಎಲ್ಲವನ್ನೂ ಸಮನ್ವಯಗೊಳಿಸುವ ಅದ್ಭುತವಾದ ಪರಿಣಾಮವನ್ನು ಹೊಂದಿದೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಕಾಂಚನಲತಾ**

ಅನೇಕರು ಈಗ ಬೆಳಕನ್ನು ಚಾನೆಲ್ ಮಾಡುತ್ತಿದ್ದಾರೆ. ಅವರಲ್ಲಿ ಕೆಲವರು ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಈ ಅನುಭವಗಳನ್ನು ಓದುವುದು ನಮಗೆ ಒಂದು ಸೋಜಿಗದ ಅನುಭವ. ಸ್ವಲ್ಪ ಕಾಲ ಲೈಟ್ ಚಾನೆಲ್ ಮಾಡಿದ ನಂತರ, ಅವರು ಸಮಾಧಾನಿಯಾದರು ಮತ್ತು ಕೋಪವನ್ನು ತೊಡೆದುಹಾಕಲು ಸಾಧ್ಯವಾಯಿತು ಎಂದು ಒಬ್ಬರು ಬರೆದು ತಿಳಿಸಿದರು. ನಾವು ಇದರ ಬಗ್ಗೆ ಯೋಚಿಸಿದರೆ, ಇದೊಂದು ಜೀವನದ ಗತಿಯನ್ನೇ ಬದಲಿಸುವ ಅನುಭವ. ನಾವು ಶಾಂತರಾದಾಗ, ನಾವು ಕೋಪದಿಂದ ಮುಕ್ತರಾದಾಗ, ಜೀವನದ ಅನುಭವವು ನಮಗೆ ಬದಲಾಗುತ್ತದೆ. ನಮ್ಮ ಪರಸ್ಪರ ಸಂವಹನ ಉಲ್ಲಾಸಕರವಾಗುತ್ತದೆ. ನಮ್ಮ ವಿಧಿ ಬದಲಾಗುತ್ತದೆ.

ಬೆಳಕಿನಲ್ಲಿ ಅಂತಹ ಜೀವನದ ಗತಿಯನ್ನು ಬದಲಾಯಿಸುವ ಸಾಧ್ಯತೆಗಳಿವೆ!!

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಕಾಂಚನಲತಾ**

ಎರಡು ವರ್ಷಗಳಿಗೂ ಹೆಚ್ಚಿನ ಅಂತರದ ನಂತರ ನಮ್ಮ ಕಾರ್ಯಕರ್ತರು ಶಾಲೆಗಳಿಗೆ ಭೇಟಿ ನೀಡಲು ಆರಂಭಿಸಿರುವುದನ್ನು ಗಮನಿಸಲು ಅದ್ಭುತವೆನಿಸುತ್ತದೆ. ಶಾಲಾ ಅಧಿಕಾರಿಗಳು ನಮ್ಮ ಕಾರ್ಯಕರ್ತರಿಗೆ ಬಹಳ ಆತ್ಮೀಯವಾದ ಸ್ವಾಗತ ನೀಡಿದರು. ಕೆಲವು ಪ್ರಾಂಶುಪಾಲರು ಮತ್ತು ಶಿಕ್ಷಕರು ತಮ್ಮ ಶಾಲೆಗಳನ್ನು ಲೈಟ್ ಚಾನೆಲ್ ಮಾಡುವ ಮೂಲಕ ಆರಂಭಿಸಬೇಕೆಂದು ಬಯಸಿದರು ಎಂದು ತಿಳಿದಾಗ ಬಹಳ ಸಂತೋಷವಾಯಿತು. ಇಂದಿನ ಸವಾಲಿನ ದಿನಗಳಲ್ಲಿ ಧ್ಯಾನದ ಪ್ರಾಮುಖ್ಯತೆಯು ಅವರಿಗೆ ಹೇಗೋ ತಿಳಿದಿದೆ. ನಮ್ಮ ಕಾರ್ಯಕರ್ತರ ಬಗೆಗಿನ ಅವರ ಒಲವನ್ನು ಮತ್ತು ಲೈಟ್ ಚಾನೆಲಿಂಗ್ ಮೇಲಿನ ಅವರ ಅಚಲವಾದ ನಂಬಿಕೆಯನ್ನು ನಾವು ಪ್ರಶಂಸಿಸುತ್ತೇವೆ.

ಜಗತ್ತು ರಾತ್ರೋರಾತ್ರಿ ಬದಲಾಗದೇ ಇರಬಹುದು ಆದರೆ ಭರವಸೆ ಇದೆ. ಜಾಗೃತಿಯು ಕ್ರಮೇಣವಾಗಿ ಬೆಳೆಯುತ್ತಿದೆ. ಯುದ್ಧ ಮತ್ತು ಅನ್ಯಾಯದ ವಿರುದ್ಧ ಜಗತ್ತಿನೆಲ್ಲೆಡೆ ಜನರು ಪ್ರತಿಭಟಿಸುತ್ತಿದ್ದಾರೆ. ಅನೈತಿಕ ಮತ್ತು ಭ್ರಷ್ಟಾಚಾರದ ವ್ಯವಸ್ಥೆಗಳ ವಿರುದ್ಧ ಜನರ ಆಕ್ರೋಶ ಹೆಚ್ಚಾಗುತ್ತಿರುವುದನ್ನು ನಾವು ಕಾಣಬಹುದಾಗಿದೆ. ಅತಿ ಶೀಘ್ರದಲ್ಲೇ ಬದಲಾವಣೆಯುಂಟಾಗುತ್ತದೆ. ಬೆಳಕು ಬೇಗನೇ ಮೂಡಲಿದೆ. ಹೊಸ ಬದುಕಿನ ಹೊಸ ಆರಂಭ ಶೀಘ್ರದಲ್ಲೇ ಸ್ಥಾಪಿತವಾಗಲಿದೆ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.
ಫೋನ್: (080) 2846 5280, 99000 75280 (10am to 5pm), ಇ-ಮೇಲ್: info@lightagemasters.com
website : www.lightagemasters.com, www.lightchannels.com

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಪ್ರತಿಯೊಬ್ಬರಿಗೂ ಸ್ವಾತಂತ್ರ್ಯವಿರಬೇಕು. ಆದರೆ ನಮ್ಮ ಸ್ವಾತಂತ್ರ್ಯ ಇತರರ ಸ್ವಾತಂತ್ರ್ಯಕ್ಕೆ ಅಡ್ಡ ಬರಬಾರದು.
- ಯಾವುದನ್ನೂ ಇನ್ನೊಬ್ಬ ವ್ಯಕ್ತಿಯ ಮೇಲೆ ಹೇರಬಾರದು. ಅದು ಎಷ್ಟೇ ಉತ್ತಮವಾದದ್ದಾದರೂ ಅದನ್ನು ಸ್ವೀಕರಿಸಲು ಆ ವ್ಯಕ್ತಿಯೇ ಒಪ್ಪಬೇಕು.
- ನಮ್ಮ ವರ್ತನೆಗಳು ಮತ್ತು ಜೀವನದ ಸಂಕೀರ್ಣತೆಗಳು ಒತ್ತಡವನ್ನು ಉಂಟುಮಾಡುತ್ತವೆ. ನಮ್ಮ ಅಹಂ ಅನೇಕ ಸಮಸ್ಯೆಗಳನ್ನು ತರುತ್ತದೆ; ಜೀವನದ ಆದ್ಯತೆಗಳ ಬಗ್ಗೆ ನಮಗೆ ಸ್ಪಷ್ಟತೆ ಇಲ್ಲ. ನಿಜವಾದ ಶಾಂತಿ ಬೇಕಿದ್ದರೆ, ಅದನ್ನು ಪ್ರತ್ಯೇಕವಾಗಿ ಮಾಡಲಾಗುವುದಿಲ್ಲ. ನಾವು ಸಕಾರಾತ್ಮಕರಾಗಬೇಕು ಮತ್ತು ಆಧ್ಯಾತ್ಮಿಕವಾಗಬೇಕು. ನಮ್ಮ ಜೀವನದ ದೃಷ್ಟಿಕೋನವನ್ನು ಬದಲಾಯಿಸಿ ಕೊಂಡು ಸಮನ್ವಯ ಸಾಧಿಸಿದಾಗ ಮಾತ್ರ ಶಾಂತಿ ದೊರೆಯುತ್ತದೆ.
- ವೈವಿಧ್ಯತೆಯು ಈ ಲೋಕದ ವೈಶಿಷ್ಟ್ಯತೆ. ವೈವಿಧ್ಯತೆ–ಯಲ್ಲಿ ಸೌಂದರ್ಯವಿದೆ. ವಿಧವಿಧವಾದ ಗಿಡಗಳು, ಹಕ್ಕಿಗಳು, ಬೆಟ್ಟಗಳು, ನದಿಗಳು, ಬಣ್ಣಗಳು, ಸಂಗೀತದ ಸ್ವರಚಿಹ್ನೆಗಳು (musical notes) ಇತ್ಯಾದಿಗಳು ಈ ವೈವಿಧ್ಯತೆಯ ಒಂದು ಭಾಗ. ಈ ಲೋಕದ ವೈವಿಧ್ಯತೆಯಲ್ಲಿ ಭಗವಂತನು ತಾನೇ ಪ್ರಕಟ–ಗೊಂಡಿದ್ದಾನೆ. ವೈವಿಧ್ಯತೆಯು ಈ ಭೂಮಿಯ ಮೇಲಿನ ಅವನ ಅಭಿವ್ಯಕ್ತಿಯಾಗಿದೆ.
- ದೇವರೊಂದಿಗೆ ಶ್ರುತಿಗೊಳ್ಳಲು ಧ್ಯಾನ ಮಾಡುತ್ತೇವೆ. ನಮಗೆ ಅವನ ಇರುವಿಕೆಯ ಅರಿವಿದ್ದರೆ, ಅತಿ ಸಣ್ಣ ಸಮಸ್ಯೆಯಿಂದ ಅತಿ ದೊಡ್ಡ ಸಮಸ್ಯೆಯವರೆಗೆ ಎಲ್ಲವನ್ನೂ ಅವನು ನೋಡಿಕೊಳ್ಳುತ್ತಾನೆ.
- ಎಲ್ಲಾ ಭ್ರಷ್ಟ ವ್ಯವಸ್ಥೆಗಳು ಕ್ರಮೇಣವಾಗಿ ಅಥವಾ ಥಟ್ಟನೆ ಕುಸಿದು ಬೀಳುತ್ತವೆ.
- ಬೆಳಕಿಗೆ ಅತ್ಯುನ್ನತವಾದ ಬುದ್ಧಿಶಕ್ತಿಯಿದೆ. ನಮಗೆ ಅತ್ಯುತ್ತಮವಾದುದು ಯಾವುದು ಮತ್ತು ಯಾವುದು ಅಲ್ಲ ಎನ್ನುವುದು ಬೆಳಕಿಗೆ ತಿಳಿದಿದೆ. ನಾವು ಬುದ್ಧಿವಂತರು ಎಂದು ಅಂದುಕೊಂಡರೂ ಕೂಡಾ, ಬೆಳಕಿನ ವಿವೇಕದ ಮುಂದೆ ನಮ್ಮ ವಿವೇಕ ಏನೇನೂ ಇಲ್ಲ.
- ನಾವು ಬೆಳಕಿನೊಂದಿಗೆ ಶ್ರುತಿಗೊಂಡಾಗ ಮತ್ತು ಬೆಳಕನ್ನು ನಮ್ಮ ಆಂತರಿಕ ಮಾರ್ಗದರ್ಶಿಯನ್ನಾಗಿ ಮಾಡಿಕೊಂಡಾಗ ನಮಗೆ ಬೆಳಕನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲು ಸಾಧ್ಯವಾಗುತ್ತದೆ.
- ಸಂಪೂರ್ಣ ವಿಶ್ವಾಸದಿಂದ ಬೆಳಕನ್ನು ಅಂಗೀಕರಿಸಿ. ನಿಮಗೆ ಸದಾ ಸರಿಯಾದ ಮಾರ್ಗದರ್ಶನ ದೊರೆಯುತ್ತದೆ.
- ಧ್ಯಾನವು ನಮಗೆ ಹೆಚ್ಚಿನ ಸಾಮಾನ್ಯ ಜ್ಞಾನವನ್ನು ತಂದುಕೊಡುತ್ತದೆ. ಒಬ್ಬ ಧ್ಯಾನಿಯು ಎಂತಹುದೇ ಒತ್ತಡವನ್ನೂ ತಡೆದುಕೊಳ್ಳಬಲ್ಲ.
- ಧ್ಯಾನದಲ್ಲಿ, ನಾವು ಸಕಲ ಶಕ್ತಿಗಳ ಕೇಂದ್ರವಾದ ಅಂತರಂಗವನ್ನು ಮುಟ್ಟುತ್ತೇವೆ. ನಾವು ಈ ಶಕ್ತಿಯನ್ನು ಪಡೆಯಬಹುದು ಮತ್ತು ಯಾವ ಉದ್ದೇಶಕ್ಕಾಗಿಯಾದರೂ ಬಳಸಿಕೊಳ್ಳಬಹುದು. ಧ್ಯಾನವು ನಮಗೆ ಎಲ್ಲಾ ರೀತಿಯಲ್ಲೂ ಸಹಾಯ ಮಾಡುತ್ತದೆ.

–ಗುರೂಜಿ ಕೃಷ್ಣಾನಂದ



ತಿಪಟೂರಿನ ಕಲ್ಪತರು ಸೆಂಟ್ರಲ್ ಸ್ಕೂಲಿನ ವಿದ್ಯಾರ್ಥಿಗಳ ತಂದೆ ತಾಯಿಯರು ಮೇ 27, 2022 ರಂದು ಲೈಟ್ ಚಾನಲ್ ಮಾಡಿದರು.



ಬೆಂಗಳೂರಿನ ಪ್ರೌಢಶಾಲೆಯೊಂದರ ವಿದ್ಯಾರ್ಥಿಗಳು ಜೂನ್ 6, 2022 ರಂದು ಲೈಟ್ ಚಾನಲ್ ಮಾಡಿದರು.



ಬೆಂಗಳೂರಿನ ಶಾಲೆಯೊಂದರ ವಿದ್ಯಾರ್ಥಿಯೊಬ್ಬರು ತಮ್ಮ ಲೈಟ್ ಚಾನಲಿಂಗ್ ಅನುಭವಗಳನ್ನು ತಮ್ಮ ಸಹಪಾಠಿಗಳ ಜೊತೆ ಜೂನ್ 17, 2022 ರಂದು ಹಂಚಿಕೊಂಡರು.

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು 15 ಮೇ 2022

**ಅನು: ಕಾಂಚನಲತಾ**

ಗುರೂಜಿ ಕೃಷ್ಣಾನಂದರವರು ಮೇ 18, 2008ರಂದು ಬೆಳಕಿನ ಚಾನಲ್‌ಗಳ ವಿಶ್ವ ಸಂಚಲನವನ್ನು ಪ್ರಾರಂಭಿಸಿದರು. ಈ ಸದ್ದಿಲ್ಲದ ಸಂಚಲನದ 14 ವರ್ಷಗಳನ್ನು ಇದೇ ಮೇ 18ನೇ ತಾರೀಕಿನಂದು ನಾವು ಪೂರ್ಣಗೊಳಿಸುತ್ತೇವೆ. ಅವರು ಈ ಸಂಚಲನವನ್ನು ಪ್ರಾರಂಭಿಸಿದಾಗ, ನಾವು ಕೆಲವು ನೂರು ಜನ ಲೈಟ್ ಚಾನೆಲಿಂಗ್ ಮಾಡಲು ಆರಂಭಿಸಿದೆವು. ನಾವು ಅವರ ಬಳಿ ಧ್ಯಾನವನ್ನು ಕಲಿಯುತ್ತಿದ್ದ ಅವರ ವಿದ್ಯಾರ್ಥಿಗಳಾಗಿದ್ದೆವು. ಈ 14 ವರ್ಷಗಳಲ್ಲಿ, ಈ ಸಂಚಲನವು ಬೆಳೆದಿದೆ. ಈಗ ಲಕ್ಷಾಂತರ ಜನರು ಲೈಟ್ ಚಾನೆಲ್ ಮಾಡುತ್ತಿದ್ದಾರೆ.

ಯಾವುದೇ ಕ್ರಾಂತಿಯು ಒಬ್ಬ ವ್ಯಕ್ತಿಯಿಂದ ಆರಂಭವಾಗುತ್ತದೆ ಎಂದು ಗುರೂಜಿಯವರು ಹೇಳುತ್ತಿದ್ದರು. ಆ ವ್ಯಕ್ತಿಯು ಕನಸನ್ನು, ದೂರದೃಷ್ಟಿಯನ್ನು ಹೊಂದಿರುತ್ತಾನೆ. ಆ ಕನಸು ಕಂಪಿಸಲು ಆರಂಭವಾಗುತ್ತದೆ. ನಂತರ, ಆ ಕನಸಿನಿಂದ ಪ್ರೇರೇಪಿತರಾದ ಕೆಲವು ಆಪ್ತ ಒಡನಾಡಿಗಳು, ಈ ವ್ಯಕ್ತಿಯೊಂದಿಗೆ ಮತ್ತು ಆತನ ಅಥವಾ ಆಕೆಯ ಕನಸಿನೊಂದಿಗೆ ಶ್ರುತಿಗೊಳ್ಳುತ್ತಾರೆ. ಆ ಕನಸನ್ನು ನನಸಾಗಿಸಲು ಅವರು ಈ ವ್ಯಕ್ತಿಯೊಂದಿಗೆ ಸೇರುತ್ತಾರೆ. ಆಗ ಆ ಕನಸು ಹೆಚ್ಚು ಬಲವಾಗಿ ಕಂಪಿಸತೊಡಗುತ್ತದೆ. ಅನಂತರ ಈ ತರಂಗಗಳು ಇತರರನ್ನು ತಲುಪುತ್ತವೆ ಮತ್ತು ಇನ್ನಷ್ಟು ಜನರು ಪ್ರೇರೇಪಿತರಾಗುತ್ತಾರೆ ಮತ್ತು ಆ ಕನಸಿನೊಂದಿಗೆ ಶ್ರುತಿಗೊಳ್ಳುತ್ತಾರೆ. ಈ ರೀತಿಯಾಗಿ ಕನಸಿನ ತರಂಗಗಳು ಹೆಚ್ಚು ಹೆಚ್ಚು ಬಲ ಪಡೆಯುತ್ತವೆ. ಈ ರೀತಿಯಾಗಿ ಕ್ರಾಂತಿಯು ಹರಡುತ್ತದೆ. ಆ ಕನಸು ಜಾಗತಿಕ ಉದ್ದೇಶಕ್ಕಾಗಿ ಆಗಿದ್ದರೆ, ಸಾರ್ವಜನಿಕರ ಹಿತಾಶಕ್ತಿಗಾಗಿ ಆಗಿದ್ದರೆ, ಜನರ ಆಧ್ಯಾತ್ಮಿಕ ಏಳಿಗೆಗಾಗಿ ಆಗಿದ್ದರೆ, ಆಗ ಅದು ವಿಶ್ವದಿಂದ ಕೂಡ ಸಹಾಯ ಪಡೆಯುತ್ತದೆ. ಭಗವಂತನಿಂದ, ಭಗವಂತನ ಚಾನೆಲ್‌ಗಳಿಂದ ಸಹಾಯ ಪಡೆಯುತ್ತದೆ ಮತ್ತು ಆ ಕನಸು ಹೆಚ್ಚು ಹೆಚ್ಚು ಪ್ರಬಲವಾಗುತ್ತದೆ.

ಗುರೂಜಿಯವರಿಂದ ಆರಂಭವಾದ ಸಂಚಲನವು ಬಲಗೊಳ್ಳುತ್ತಿದೆ. ಇದರಲ್ಲಿ ಪಾಲ್ಗೊಳ್ಳುತ್ತಿರುವ ನಿಮಗೆ ಧನ್ಯವಾದಗಳು ಮತ್ತು ಈ ಸಂಚಲನದಲ್ಲಿ ಭಾಗವಹಿಸುತ್ತಿರುವ, ನಿಯತವಾಗಿ ಲೈಟ್ ಚಾನೆಲ್ ಮಾಡುತ್ತಿರುವ ಸಾವಿರಾರು ಶಾಲೆಗಳಿಗೆ, ಈ ಶಾಲೆಗಳ ಆಡಳಿತಾಧಿಕಾರಿಗಳಿಗೆ ಮತ್ತು ಲಕ್ಷಾಂತರ ಮಕ್ಕಳಿಗೆ ವಂದನೆಗಳು. ನವ ಯುಗವು ಈ ಭೂಮಿಯ ಮೇಲೆ ಬರುವುದನ್ನು ನೋಡುವುದು ಗುರೂಜಿಯವರ ಕನಸಾಗಿತ್ತು. ಪ್ರತಿಯೊಬ್ಬ ವ್ಯಕ್ತಿಯೂ ಬೆಳಕಿನೊಂದಿಗೆ ನೇರವಾದ ಸಂಪರ್ಕ ಹೊಂದುವುದನ್ನು ನೋಡುವ ಕನಸು ಅದಾಗಿತ್ತು. ನಮಗೆ ತಿಳಿದಿರುವಂತೆ, ದೇವರೇ ಆ ಬೆಳಕು. ಪ್ರತಿಯೊಬ್ಬ ವ್ಯಕ್ತಿಯೂ ದೇವರನ್ನು ನೇರವಾಗಿ ಸಂಪರ್ಕಿಸಬೇಕು, ಬೆಳಕು ಅಥವಾ ದೇವರಿಂದ ಚೈತನ್ಯಗಳನ್ನು ಪಡೆಯಬೇಕು ಮತ್ತು ಆ ಚೈತನ್ಯಗಳನ್ನು ಹರಡಬೇಕು ಎಂಬುದು ಅವರ ಆಶಯವಾಗಿತ್ತು. ಆತ ಅಥವಾ ಆಕೆ ಭಗವಂತನಿಂದಲೇ ನೇರವಾದ ಪ್ರಯೋಜನಗಳನ್ನು ಪಡೆಯಬೇಕು ಮತ್ತು ಅವನಿಂದ ನೇರವಾದ ಮಾರ್ಗದರ್ಶನವನ್ನು ಪಡೆಯಬೇಕೆನ್ನುವುದು ಗುರೂಜಿ ಕೃಷ್ಣಾನಂದರವರ ಕನಸಾಗಿತ್ತು. ದೇವರೊಂದಿಗೆ ನೇರವಾದ ಸಂಪರ್ಕ ಹೊಂದಲು ಯಾವುದೇ ತಂತ್ರದ ಅಗತ್ಯವಿಲ್ಲದಿದ್ದರೂ, ಗುರೂಜಿ ಕೃಷ್ಣಾನಂದರವರು ನೀಡಿರುವ ಈ ಲೈಟ್ ಚಾನೆಲಿಂಗ್ ತಂತ್ರವು ಸಹಾಯ ಮಾಡುತ್ತದೆ. ದೇವರೊಂದಿಗೆ ಪ್ರಜ್ಞಾಪೂರ್ವಕವಾಗಿ ಸಂಪರ್ಕ ಹೊಂದಲು ಮತ್ತು ಯಾವಾಗಲೂ ಅವನೊಂದಿಗೆ ಸಂಪರ್ಕದಲ್ಲಿದ್ದೇವೆ ಎನ್ನುವ ಅರಿವಿನಲ್ಲಿರಲು ಇದು ನಮಗೆ ಸಹಾಯ ಮಾಡುತ್ತದೆ. ಈ ತಂತ್ರವನ್ನು ಅಭ್ಯಾಸ ಮಾಡಿದಾಗ, ಈ ಸಂಪರ್ಕದ ಅರಿವಾಗುತ್ತದೆ. ನಾವು ಅವನಿಂದ ಚೈತನ್ಯಗಳನ್ನು ಪಡೆಯುತ್ತಿರುವ ಮತ್ತು ಅವುಗಳನ್ನು ಹರಡುತ್ತಿರುವುದರ ಅರಿವಾಗುತ್ತದೆ. ಈ ಅರಿವು ನಮಗೆ ಸಹಾಯಕ ಎಂದು ನನಗನಿಸುತ್ತದೆ. ನಮ್ಮ ಸಂಪೂರ್ಣ ವ್ಯವಸ್ಥೆಯು ಈ ಪ್ರಕ್ರಿಯೆಯಲ್ಲಿ ಪ್ರಜ್ಞಾಪೂರ್ವಕವಾಗಿ ಭಾಗವಹಿಸಬಹುದು. ನಾವು ಚೈತನ್ಯಗಳನ್ನು ಪಡೆದು, ಈ ಅದ್ಭುತವಾದ ಚೈತನ್ಯಗಳ ಮಾರ್ಗದರ್ಶನದಂತೆ ಜೀವನ ನಡೆಸಲು ಪ್ರಾರಂಭಿಸಿದಾಗ, ನವ ಯುಗದ ಮೌಲ್ಯಗಳನ್ನು ಪಾಲಿಸಲಾರಂಭಿಸುತ್ತೇವೆ.

ಈ ಭೂಮಿಯ ಮೇಲಿರುವ ಪ್ರತಿಯೊಬ್ಬ ವ್ಯಕ್ತಿಯೂ, ಪ್ರತಿಯೊಬ್ಬರೂ ಅಲ್ಲದಿದ್ದರೂ, ಈ ಭೂಮಿಯ ಮೇಲಿನ ಹೆಚ್ಚಿನ ಜನರು, ನವಯುಗದ ಮೌಲ್ಯದೊಂದಿಗೆ ಜೀವಿಸಲು ಆರಂಭಿಸಿದರೆ, ಆಗ ನಾವು ಇಲ್ಲಿ ನವ ಯುಗವನ್ನು ಕಾಣಬಹುದು. ಆದುದರಿಂದಲೇ, ನಮ್ಮ ಪಾತ್ರ ಬಹಳ ಮುಖ್ಯವಾದುದು. ನಾವು ನಿರೀಕ್ಷೆ ಮಾಡುತ್ತಿರುವ ನವ ಯುಗದ ಆಗಮನವು ವಿಧಿನಿಯಮವಾಗಿದೆ. ಈ ವಿಧಿನಿಯಮವನ್ನು ಸಾಕಾರಗೊಳಿಸುವ ಮಾರ್ಗವನ್ನು ಗುರೂಜಿಯವರು ತೋರಿಸಿದ್ದಾರೆ. ಈ ವಿಧಿನಿಯಮವು ನಮ್ಮ ಮೂಲಕವೇ ಅಭಿವ್ಯಕ್ತಗೊಳ್ಳಬೇಕು. ನಾವು ಈ ವಿಧಿನಿಯಮವನ್ನು ನಿರ್ಮಾಣ ಮಾಡಬೇಕು. ಈ ವಿಧಿನಿಯಮದ ನಿರ್ಮಾಣದ ಪ್ರಕ್ರಿಯೆಯಲ್ಲಿ ನಾವು ಭಾಗವಹಿಸದೇ ಇದ್ದರೂ ಸಹ ಅದು ಪ್ರಕಟಗೊಳ್ಳುತ್ತದೆ, ಏಕೆಂದರೆ ಬೇರೆಯವರು ಈ ನಿರ್ಮಾಣದ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾರೆ. ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ನಮಗೆ ಇದು ಒಂದು ಅದ್ಭುತವಾದ ಅವಕಾಶ. ನವ ಯುಗವು ನಮ್ಮ ಮೂಲಕ ಧರೆಗಿಳಿಯಲು ಕಾಯುತ್ತಿದೆ ಹಾಗೂ ನಾವು ಅದು ಕೆಳಗಿಳಿದು ಬರಲು ಆಸ್ಪದ ನೀಡಬೇಕು.

ನಾವು ಅದನ್ನು ಹೇಗೆ ಮಾಡಬೇಕು? ಲೈಟ್ ಚಾನೆಲ್ ಮಾಡುವ ಮೂಲಕ, ಬೆಳಕಿನೊಂದಿಗೆ ಶ್ರುತಿಗೊಂಡು ಜೀವಿಸುವುದನ್ನು ಪ್ರಾರಂಭಿಸುವ ಮೂಲಕ, ಬೆಳಕಿನ ಮೌಲ್ಯಗಳೊಂದಿಗೆ ಜೀವಿಸುವ ಮೂಲಕ ಮಾಡಬೇಕು. ■

### ಲೈಟ್ ಚಾನಲಿಂಗ್ ಕೇಂದ್ರಗಳು

ಕೆಳಗೆ ತಿಳಿಸಿದ ನಮ್ಮ ಲೈಟ್ ಚಾನಲಿಂಗ್ ಕೇಂದ್ರದಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಾಗಿಲ್ಲ.

**ಶುಕ್ರವಾರ** (ಬೆಳಿಗ್ಗೆ 11 ರಿಂದ 11.15ರ ತನಕ)
ಸಿದ್ಧಿ ವಿನಾಯಕ ದೇವಸ್ಥಾನ, 59/1,
ಹಚಿನ್ಸ್ ರಸ್ತೆ, 3ನೇ ಅಡ್ಡ ರಸ್ತೆ,
ಕೂಕ್ ಟೌನ್, ಬೆಂಗಳೂರು.
✆ 9980205803 ನಿರ್ಮಲ ಬಾಲ

### ಶಾಲೆಗಳಲ್ಲಿ ಲೈಟ್ ಚಾನಲಿಂಗ್




| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5758 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 29.65 ಲಕ್ಷ |

ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ-ಮೇಲ್ info@lightagemasters.com ಗೆ ಬರೆಯಿರಿ.

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.




# ಅನುಭವಗಳು

ಸಂ: ವೈಶಾಲಿ ಜೋಶಿ; ಅನು: ಸುಜಾತ ರಾಮರಾವ್

ಕೆಲ ವರ್ಷಗಳ ಹಿಂದೆ, ನಾನು ಕಛೇರಿಯಿಂದ ಸಂಜೆ ತಡವಾಗಿ ಕಾರಿನಲ್ಲಿ ಇನ್ನೇನು ಹೊರಡಬೇಕೆಂದಿರುವಾಗ ಹೊರಗಡೆ ಜೋರು ಮಳೆಯಿಂದ ನನಗೆ ಹೊರಡಲು ಸಾಧ್ಯವಾಗಲಿಲ್ಲ. ಹೇಗೋ ಚಾಲಕನು ಕಛೇರಿಯ ಆವರಣದಿಂದ ಕಛೇರಿಯ ಮುಖ್ಯ ದ್ವಾರದವರಗೆ ಓಡಿಸಿದನು. ಕಾರಿನ ಗಾಜೊರೆಸುವ ರಬ್ಬರ್ ಪಟ್ಟಿಗಳು (wipers) ಮಧ್ಯದಲ್ಲೆ ಅಂಟಿಕೊಂಡಿದ್ದರಿಂದ ಮತ್ತು ಸರಿಯಾಗಿ ಕಾಣಿಸದೇ ಇದ್ದುದರಿಂದ ನಾವು ಮುಂದೆ ಹೋಗಲು ಸಾಧ್ಯವಾಗಲಿಲ್ಲ. ನಾನು ಬೆಳಕಿಗೆ ಪ್ರಾರ್ಥನೆ ಮಾಡಿದೆ ಮತ್ತು ಅದನ್ನು ಕಾರಿಗೆ ಚಾನೆಲ್ ಮಾಡಿದೆ. ಚಾಲಕನಿಗೆ ಮತ್ತು ಬೇರೆಯವರಿಗೆ ಇದರ ಬಗ್ಗೆ ತಿಳಿದಿರಲಿಲ್ಲ. ಇದ್ದಕ್ಕಿದ್ದಂತೆ, ರಬ್ಬರ್ ಪಟ್ಟಿಗಳು ಕೆಲಸ ಮಾಡಲು ಆರಂಭಿಸಿದವು ಮತ್ತು ನಾವು ಮುಂದೆ ಹೋಗಲು ಸಾಧ್ಯವಾಯಿತು. ಇದು ಒಂದು ಪವಾಡ–ವಾಗಿತ್ತು. ನನಗೆ ತುಂಬಾ ಸಂತೋಷವಾಯಿತು ಮತ್ತು ಬೆಳಕಿಗೆ ವಂದಿಸಿದೆ. ನಾವು ಪಟ್ಟಣ ಸೇರಿದಾಗ, ಮಳೆ ಬಹುತೇಕ ನಿಂತಿತ್ತು ಮತ್ತು ರಬ್ಬರ್ ಪಟ್ಟಿಗಳು ಕೂಡ ಕೆಲಸ ಮಾಡುವುದನ್ನು ನಿಲ್ಲಿಸಿದ್ದವು! ಚಾಲಕನು ರಬ್ಬರ್ ಪಟ್ಟಿಗಳನ್ನು ಬಳಸಲು ಪ್ರಯತ್ನಿಸಿದಾಗ ಅದು ಕೆಲಸ ಮಾಡಲಿಲ್ಲ. ಸಹಾಯ ಮಾಡಿದ್ದಕ್ಕಾಗಿ ಬೆಳಕಿಗೆ ನಾನು ಮತ್ತೊಮ್ಮೆ ವಂದಿಸಿದೆ.

ಇತ್ತೀಚೆಗೆ, ನಾನು ನನ್ನ ಕಛೇರಿಯ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ, ಅದೇ ಬಸ್ಸಿನಲ್ಲಿದ್ದ ನನ್ನ ಸಹೋದ್ಯೋಗಿಯೊಬ್ಬರು ತಮಗೆ ತೀವ್ರವಾದ ಬೆನ್ನು ನೋವಿದೆ ಎಂದು ನನಗೆ ಒಂದು ಸಂದೇಶ ಕಳುಹಿಸಿದರು. ನಾನು ಅವರಿಗೆ ಸ್ವಲ್ಪ ಸಮಯ ಲೈಟ್ ಚಾನೆಲ್ ಮಾಡಿದೆ. ನಂತರ ನೋವು ಕಡಿಮೆಯಾಗಿದೆ ಎಂದು ಅವರಿಂದ ಇನ್ನೊಂದು ಸಂದೇಶ ಬಂದಿತು.

–ಹರಿಕೃಷ್ಣನ್ ವಿ, ಲೈಟ್ ಚಾನೆಲ್

ಲೈಟ್ ಚಾನೆಲ್ ಮಾಡುವುದರ ಮೂಲಕ ದಿನವನ್ನು ಆರಂಭಿಸುವುದು ಅದ್ಭುತವಾಗಿರುತ್ತದೆ. ನಾನು ಶಾಂತವಾಗಿರುತ್ತೇನೆ ಮತ್ತು ಗಮನವನ್ನು ಕೇಂದ್ರಿಕರಿಸ ಬಲ್ಲೆ.

–ಸದಸ್ಯರು, ಹೆಚ್.ಐ.ಎಫ್ಹ್.ಇ.ಎನ್ ಕ್ಲಬ್, ಬೆಂಗಳೂರು

ನಾನು ಮೊದಲ ಬಾರಿ ಲೈಟ್ ಚಾನೆಲ್ ಸೆಷನ್‌ನಲ್ಲಿ ಭಾಗವಹಿಸಿದೆ. ಬೆಳಗಿನ ಸಮಯದಲ್ಲಿ ಪ್ರಶಾಂತತೆಯನ್ನು ಅನುಭವಿಸಿದ ಕಾರಣ ಆ ದಿನ ಅದ್ಭುತವಾಗಿ ಪ್ರಾರಂಭವಾಯಿತು. ಧನ್ಯವಾದಗಳು.

–ಗೋಪಿನಾಥನ್ ಕೆ. ಪಿ, ಲೈಟ್ ಚಾನಲ್

ಲೈಟ್ ಚಾನೆಲಿಂಗ್ ಸೆಷನ್‌ಗೆ ಮುಂಚೆ ನಾನು ಗೊಂದಲದಲ್ಲಿದ್ದೆ. ಚಾನೆಲ್ ಮಾಡಿದ ನಂತರ ನನಗೆ ಸಮಾಧಾನ ದೊರೆಯಿತು.

– ಓಂಕಾರ್, ವಿದ್ಯಾರ್ಥಿ, ದಿ ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸಬಿಲಿಟಿ, ಬೆಂಗಳೂರು

ನಮ್ಮ ಕೋರ್ಸ್ ಸ್ವಲ್ಪ ದಿನಗಳಲ್ಲಿ ಮುಗಿಯುತ್ತದೆ ಮತ್ತು ನನ್ನ ಭವಿಷ್ಯದ ಬಗ್ಗೆ ಮತ್ತು ಕೆಲಸ ಸಿಗುವ ಬಗ್ಗೆ ನನ್ನ ಮನಸ್ಸಿನಲ್ಲಿ ಭಯವಿತ್ತು. ಈಗ, ಲೈಟ್ ಚಾನೆಲ್ ಮಾಡಿದ ನಂತರ ನನ್ನಲ್ಲಿ ಭರವಸೆಯಿದೆ ಮತ್ತು ಶಾಂತಿಯಿಂದಿದ್ದೇನೆ.

–ಪ್ರಿಯಾಂಕ, ವಿದ್ಯಾರ್ಥಿ, ದಿ ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸೆಬಿಲಿಟಿ, ಬೆಂಗಳೂರು

ನನ್ನ ಕುಟುಂಬದ ಬಗ್ಗೆ ನನಗೆ ಚಿಂತೆ ಇತ್ತು. ಲೈಟ್ ಚಾನೆಲಿಂಗ್ ಅಭ್ಯಾಸದ ನಂತರ ನೆಮ್ಮದಿ ದೊರೆಕಿದೆ ಮತ್ತು ಶಾಂತಿಯಿಂದಿದ್ದೇನೆ.

–ವಿಶ್ವನಾಥ್, ವಿದ್ಯಾರ್ಥಿ, ದಿ ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸೆಬಿಲಿಟಿ, ಬೆಂಗಳೂರು

ಸಾಂಗ್ಲಿಯಲ್ಲಿರುವ ಟಕಾರಿನಿಂದ ಬಂದ ನನ್ನ ರೈತ ಗೆಳೆಯ ಶ್ರೀ ವಿಲಾಸ್ ಪಾಟಿಲ್‌ಗೆ ನಾನು ಲೈಟ್ ಚಾನೆಲಿಂಗ್ ತಂತ್ರವನ್ನು ಕಲಿಸಿ ಕೊಟ್ಟಿದ್ದೆ. ಇವತ್ತು ಅವರು ತಮ್ಮ ಅನುಭವವನ್ನು ಹೇಳಿದರು. ಅವರ ಎಮ್ಮೆಗಳಲ್ಲೊಂದು ಕಳೆದ 2–3 ವರ್ಷಗಳಿಂದ ಗರ್ಭಧರಿಸುತ್ತಿರಲಿಲ್ಲ. ಅವರು ಅನೇಕ ಪಶುವೈದ್ಯರಿಂದ ಸಹಾಯ ಪಡೆಯಲು ಪ್ರಯತ್ನಿಸಿದರು ಆದರೆ ಅದು ಯಶಸ್ವಿಯಾಗಲಿಲ್ಲ. ಅವರಿಗೆ ಚಿಂತೆಯಾಗಿತ್ತು ಏಕೆಂದರೆ ಆ ಪಶುವು ಕೆಲ ವರ್ಷಗಳ ಕಾಲ ಗರ್ಭಧರಿಸದಿದ್ದರೆ, ಅದು ಬಂಜೆತನವನ್ನು ಹೊಂದುತ್ತದೆ ಮತ್ತು ಹಾಲು ಉತ್ಪತ್ತಿ ನಿಲ್ಲುತ್ತದೆ. ಲೈಟ್ ಚಾನೆಲಿಂಗ್ ಬಗ್ಗೆ ತಿಳಿದ ನಂತರ ಅವರು ಎಮ್ಮೆಗೆ ಲೈಟ್ ಚಾನೆಲ್ ಮಾಡಲಾರಂಭಿಸಿದರು. ಈಗ ಆ ಎಮ್ಮೆ ಗರ್ಭಧರಿಸಿದೆ. ಇದು ಬೆಳಕಿನ ಸಹಾಯದಿಂದ ಸಾಧ್ಯವಾಯಿತೆಂದು ಅವರು ಹೇಳಿದರು. ಅಂತಹ ಅಸಾಧಾರಣ ರೀತಿಯಲ್ಲಿ ಕೂಡ ಬೆಳಕು ಕೆಲಸ ಮಾಡುತ್ತದೆ. ಅದು ಬಂಜೆಯಾದ ಪ್ರಾಣಿಗೆ ಸಂತಾನ ನೀಡುವ ಶಕ್ತಿಯನ್ನು ಕರುಣಿಸುತ್ತದೆ.

–ಸಂತೋಷ್ ಕೋರೆ, ಲೈಟ್ ಚಾನೆಲ್ ಕಾರ್ಯಕರ್ತ

ರಾಯಗಡದ ದಿವೇಗರ್‌ನಲ್ಲಿರುವ ಲಿಮಯೆ ವಿದ್ಯಾ ಮಂದಿರದಲ್ಲಿ ನಾವು ಒಂದು ಲೈಟ್ ಚಾನೆಲಿಂಗ್ ಸೆಷನ್‌ಅನ್ನು ನಡೆಸಿದೆವು. ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಅದುಲ್‌ಕರ್ ಮತ್ತು ಅವರ ಪತಿ ಸೆಷನ್‌ನಲ್ಲಿ ಭಾಗವಹಿಸಿದರು. ನಾವು ಅವರನ್ನು ಭೇಟಿ ಮಾಡುವ ಮುಂಚೆ, ಅವರು ಒಂದು ಸಮಸ್ಯೆಯ ಬಗ್ಗೆ ಚರ್ಚೆ ಮಾಡುತ್ತಿದ್ದುದರಿಂದ ಅವರು ಉದ್ವಿಗ್ನಗೊಂಡಿದ್ದರು, ಆದರೆ ಲೈಟ್ ಚಾನೆಲಿಂಗ್ ಸೆಷನ್ ನಂತರ ಅವರಿಗೆ ಆಹ್ಲಾದಕರವೆನಿಸಿತು, ಶಾಂತತೆ ಮೂಡಿತು ಹಾಗೂ ಯಾವುದೇ ಯೋಚನೆಗಳು ಇರಲಿಲ್ಲವೆಂದು ಶ್ರೀ ಅದುಲ್‌ಕರ್‌ರವರು ನಮಗೆ ಹೇಳಿದರು.

–ಸಂತೋಷ್ ಕೋರೆ ಮತ್ತು ಸುಚಿತ್ರ ಕೋರೆ, ಲೈಟ್ ಚಾನೆಲ್ ಕಾರ್ಯಕರ್ತರು

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ